KABR420061472025

**<u>ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ದೊಡ್ಡಬಳ್ಳಾಪುರ</u>**

**:ಉಪಸ್ಥಿತರು:**

**ಶ್ರೀಮತಿ ಪ್ರೀತಿ.ಕೆ., ಎಲ್.ಎಲ್.ಎಂ.,**

ಅಪರ ಸಿವಿಲ್ ನ್ಯಾಯಾಧೀಶರು

ಮತ್ತು ಜೆ.ಎಂ.ಎಫ್.ಸಿ.,ದೊಡ್ಡಬಳ್ಳಾಪುರ

**<u>ದಿನಾಂಕ 29 ನೇ ಏಪ್ರಿಲ್, 2026</u>**

**<u>ಸಿ.ಸಿ.4989/2025</u>**

**ಪಿರ್ಯಾದಿ :** **ಮಹಿಳಾ ಪೊಲೀಸ್ ಠಾಣೆ**
**ದೊಡ್ಡಬಳ್ಳಾಪುರ**

**(ಸಹಾಯಕ ಸರ್ಕಾರಿ ಅಭಿಯೋಜಕರು)**

**// ವಿರುದ್ಧ //**

**ಆರೋಪಿ/ತರು:** ಶ್ರೀ, ಚಂದ್ರಶೇಖರ್ ಆಲಿಯಾಸ್ ಚಂದ್ರ
ಬಿನ್ ಸಂತೋಷ್
ವಯಸ್ಸು 25 ವರ್ಷಗಳು
ವಾಸಃ ರಘುನಾಥಪುರ ಗ್ರಾಮ
ಕಸಬಾ ಹೋಬಳಿ,
ದೊಡ್ಡಬಳ್ಳಾಪುರ ತಾಲ್ಲೂಕು
ಬೆಂಗಳೂರು ಗ್ರಾಮಾಂತರ ಜಿಲ್ಲೆ.
**(ಶ್ರೀ. ಎನ್.ಕೆ.ಎಂ.., ವಕೀಲರು)**

**<u>:ತೀರ್ಪು:</u>**

ದೊಡ್ಡಬಳ್ಳಾಪುರ ಮಹಿಳಾ ಪೋಲೀಸ್ ಠಾಣಾ ಆರಕ್ಷಕ ಉಪ ನಿರೀಕ್ಷಕರು ಆರೋಪಿಯ ವಿರುದ್ಧ ಭಾ.ನ್ಯಾ.ಸಂ.ಕಲಂ: 137(2) ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂದು ಆರೋಪಿಸಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

**<u>2. ಅಭಿಯೋಜನೆ ಪ್ರಕರಣದ ಸಾರಾಂಶ ಈ ಕೆಳಗಿನಂತೆ ಇರುತ್ತದೆ.</u>**

ದಿನಾಂಕ: 29.06.2025 ರಂದು ಸಂಜೆ 6-30 ರ ಸಮಯದಲ್ಲಿ ದೊಡ್ಡಬಳ್ಳಾಪುರ ಮಹಿಳಾ ಪೋಲೀಸ್ ಠಾಣಾ ಸರಹದ್ದು, ದೊಡ್ಡಬಳ್ಳಾಪುರ ಟೌನ್ ರೈಲ್ವೆ ಸ್ಟೇಷನ್ ಹತ್ತಿರ ಆರೋಪಿಯು ಚಾಸಾ-

1 ರವರ ಮನೆಯ ಬಳಿ ಬಂದು ಚಾಸಾ-1 ರವರ ಮಗಳಾದ ಚಾಸಾ-2 ರವರನ್ನು ಅಪಹರಿಸಿಕೊಂಡು ಹೋಗಿ ತಾನು ವಾಸವಿದ್ದ ರಘುನಾಥಪುರ ಗ್ರಾಮದಿಂದ ಸ್ವಲ್ಪ ದೂರವಿರುವ ಸಿಮೆಂಟ್ ಇಟ್ಟಿಗೆ ಫ್ಯಾಕ್ಟರಿಯಲ್ಲಿ ವಾಸವಿದ್ದ ಮನೆಯಲ್ಲಿ 4 ದಿವಸಗಳ ಕಾಲ ಇರಿಸಿಕೊಂಡಿರುತ್ತಾರೆ ಎಂದು ಆ ಮೂಲಕ ಆರೋಪಿತನ ವಿರುದ್ಧ ಮೇಲ್ಕಂಡ ಶಿಕ್ಷಾರ್ಹ ಅಪರಾಧ ಮಾಡಿರುವುದಾಗಿ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಲಾಗಿದೆ.

3. ಈ ಪ್ರಕರಣದಲ್ಲಿ ಪೋಲಿಸರು ಪ್ರಥಮ ವರ್ತಮಾನ ಹೇಳಿಕೆ (ದೂರನ್ನು) ಸ್ವೀಕರಿಸಿ ಠಾಣಾ ಮೊಕದ್ದಮೆ 145/2025 ರಡಿಯಲ್ಲಿ ಪ್ರಕರಣ ದಾಖಲಿಸಿಕೊಂಡಿರುತ್ತಾರೆ. ತನಿಖೆಯ ನಂತರ ಆರೋಪಿತನ ವಿರುದ್ದ ದೋಷಾರೋಪಣೆ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗಿರುತ್ತದೆ.

4. ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ ನಂತರ ನ್ಯಾಯಾಲಯ ಆಪಾದಿಸಿದ ಅಪರಾಧಗಳಿಗೆ ಸಂಜ್ಞೇಯ ತೆಗೆದುಕೊಂಡು, ಆರೋಪಿತನ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲು ಮಾಡಿ ಸಮನ್ಸ್ ಹೊರಡಿಸಿರುತ್ತದೆ. ಆರೋಪಿತನು ಸಮನ್ಸ್ ಸ್ವೀಕಾರ ಮಾಡಿ ತಮ್ಮ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನಿನ ಮೇಲೆ ಬಿಡುಗಡೆಯಾಗಿರುತ್ತಾರೆ.

5. ಭಾ.ನಾ.ಸು.ಸಂ.ಕಲಂ 230 ರಡಿಯಲ್ಲಿ ದೋಷಾರೋಪಣಾ ಪಟ್ಟಿಯ ಪ್ರತಿಯನ್ನು ಆರೋಪಿತನಿಗೆ ನೀಡಿ, ದೋಷಾರೋಪಣೆಯನ್ನು ರಚಿಸಿ ತಿಳಿಯುವಂತೆ ಓದಿ ಹೇಳಿದಾಗ ಆರೋಪಿತನು ತಾವು ಯಾವುದೇ ತಪ್ಪು ಮಾಡಿಲ್ಲ ವಿಚಾರಣೆ ಆಗಬೇಕೆಂದು ಕೇಳಿಕೊಂಡಿರುತ್ತಾರೆ.

6. ಅಭಿಯೋಜನೆ ಪರ ಎರಡು ಸಾಕ್ಷಿದಾರರನ್ನು ವಿಚಾರಣೆಗೊಳಪಡಿಸಿ ನಿಪಿ-1 ರಿಂದ ನಿಪಿ-9 ದಾಖಲೆಗಳನ್ನು ಗುರುತಿಸಿಕೊಳ್ಳಲಾಗಿರುತ್ತದೆ. ಚಾಸಾ-1 ರವರನ್ನು ಪ್ರಾಸಾ-1 ಆಗಿ, ಚಾಸಾ-2 ರವರನ್ನು ಪ್ರಾಸಾ-2 ಆಗಿ ಅಭಿಯೋಜನೆ ಸಾಕ್ಷಿ ಗೆ ಗುರಿಸಿಪಡಿಸಿರುತ್ತದೆ. ಚಾಸಾ-1 ಈ ಪ್ರಕರಣದಲ್ಲಿನ ಪಿರ್ಯಾದಿಯಾಗಿದ್ದು ಹಾಗೂ ಚಾಸಾ-2 ರವರು ಈ ಪ್ರಕರಣದಲ್ಲಿನ ನೊಂದ ಬಾಲಕಿಯಾಗಿದ್ದು, ಅಭಿಯೋಜನೆಗೆ ಪೂರಕ ಸಾಕ್ಷ್ಯ ನುಡಿಯದ ಕಾರಣ, ಅಭಿಯೋಜಕರು ಉಳಿದ ಸಾಕ್ಷಿದಾರರಿಗೆ ಸಮನ್ಸ್ ನೀಡಲು ಕೋರಿಕೊಂಡ ಕೋರಿಕೆಯನ್ನು ಈ ನ್ಯಾಯಾಲಯ ತಿರಸ್ಕರಿಸಿರುತ್ತದೆ. ಕಾರಣ ಪ್ರಮುಖ ಸಾಕ್ಷಿ ಅಭಿಯೋಜನೆಗೆ ಬೆಂಬಲ ಸೂಚಿಸದ ಸಂದರ್ಭದಲ್ಲಿ ಉಳಿದ ಸಾಕ್ಷಿಗಳ ಸಾಕ್ಷ್ಯವು ಅಭಿಯೊಜನೆಗೆ ಸಹಾಯಕ ವಾಗಿರುವುದಿಲ್ಲ. ಆರೋಪಿತನ ವಿರುದ್ಧ ಆರೋಪಗಳಿಗೆ ಸಂಬಂಧಿಸಿದ ಸಾಕ್ಷ್ಯಾಧಾರಗಳು

ಲಭ್ಯವಿರದ ಕಾರಣ ಭಾ.ನಾ.ಸು.ಸಂ.ಕಲಂ 351 ರಡಿಯಲ್ಲಿ ಆರೋಪಿತನ ಹೇಳಿಕೆಯನ್ನು ಕೈ ಬಿಡಲಾಗಿರುತ್ತದೆ. ಆರೋಪಿತನು ತಮ್ಮ ಪರ ಯಾವುದೇ ಸಾಕ್ಷಿಯನ್ನು ವಿಚಾರಣೆಗೆ ಒಳಪಡಿಸಿಕೊಂಡಿಲ್ಲ ಮತ್ತು ದಾಖಲೆಗಳನ್ನು ಗುರುತಿಸಿಕೊಂಡಿರುವುದಿಲ್ಲ.

7. ಅಭಿಯೋಜನೆ ಪರ ಹಾಗೂ ಆರೋಪಿತನ ಪರ ವಕೀಲರ ವಾದ ಕೇಳಲಾಯಿತು ಮತ್ತು ಈ ಪ್ರಕರಣಕ್ಕೆ ಸಂಬಂಧಿಸಿದ ನ್ಯಾಯಾಲಯದ ಸಮ್ಮುಖದಲ್ಲಿರುವ ದಾಖಲೆಗಳನ್ನು ಕೂಲಂಕುಶವಾಗಿ ಪರಿಶೀಲಿಸಲಾಯಿತು.

**8. ಮೇಲ್ಕಂಡ ಸಂಗತಿಗಳಿಂದ ಕೆಳಕಂಡ ಅಂಶಗಳು ಉದ್ಭವಿಸಿರುತ್ತವೆ.**

ಅಂಶ-1:-ದಿನಾಂಕ: 29.06.2025 ರಂದು ಸಂಜೆ 6-30ರ ಸಮಯದಲ್ಲಿ ದೊಡ್ಡಬಳ್ಳಾಪುರ ಮಹಿಳಾ ಪೋಲೀಸ್ ಠಾಣಾ ಸರಹದ್ದು, ದೊಡ್ಡಬಳ್ಳಾಪುರ ಟೌನ್ ರೈಲ್ವೆ ಸ್ಟೇಷನ್ ಹತ್ತಿರ ಆರೋಪಿಯು ಚಾಸಾ-1 ರವರ ಮನೆಯ ಬಳಿ ಬಂದು ಚಾಸಾ-1 ರವರ ಮಗಳಾದ ಚಾಸಾ-2 ರವರನ್ನು ಅಪಹರಿಸಿಕೊಂಡು ಹೋಗಿ ತಾನು ವಾಸವಿದ್ದ ರಘುನಾಥಪುರ ಗ್ರಾಮದಿಂದ ಸ್ವಲ್ಪ ದೂರವಿರುವ ಸಿಮೆಂಟ್ ಇಟ್ಟಿಗೆ ಫ್ಯಾಕ್ಟರಿಯಲ್ಲಿ ವಾಸವಿದ್ದ ಮನೆಯಲ್ಲಿ 4 ದಿವಸಗಳ ಕಾಲ ಇರಿಸಿಕೊಂಡಿರುತ್ತಾರೆ ಎಂದು ಆ ಮೂಲಕ ಭಾ.ನ್ಯಾ.ಸಂ.ಕಲಂ 137(2) ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆಂಬುದನ್ನು ಅಭಿಯೋಜನೆ ಸಂಶಯಾತೀತವಾಗಿ ರುಜುವಾತು ಪಡಿಸಿರುತ್ತದೆಯೇ?

***ಅಂಶ-2*** *ಏನು ಆದೇಶ ?*

9. **ಈ ಮೇಲ್ಕಂಡ ಅಂಶಗಳನ್ನು ಈ ಕೆಳಕಂಡಂತೆ ಉತ್ತರಿಸಲಾಗಿದೆ.**

***ಅಂಶ :1 : ನಕಾರಾತ್ಮಕವಾಗಿ***

***ಅಂಶ :2 ಅಂತಿಮ ಆದೇಶದಂತೆಃ***

## **:ಕಾರಣಗಳು:**

10.**ಅಂಶಃ-1ಃ**ಆರೋಪಿತರ ವಿರುದ್ಧ ಹೊರಿಸಲಾದ ಆರೋಪಗಳನ್ನು ರುಜುವಾತು ಪಡಿಸಲು ಅಭಿಯೋಜನೆಯು ಪ್ರಾಸಾ-1 ಮತ್ತು ಪ್ರಾಸಾ-2 ರವರನ್ನು ವಿಚಾರಣೆಗೆ ಒಳಪಡಿಸಿಕೊಂಡಿದ್ದು, ನಿಪಿಃ1 ರಿಂದ ನಿಪಿಃ9 ದಾಖಲೆಗಳನ್ನು ಗುರುತಿಸಿಕೊಂಡಿರುತ್ತದೆ. ನಿಪಿ:1: ದೂರು, ನಿಪಿ-2, 4 ಮತ್ತು 6 ಕೃತ್ಯ ನಡೆದ ಸ್ಥಳದ ಪಂಚನಾಮೆ, ನಿಪಿ-3, 5 ಮತ್ತು 7

ಛಾಯಾಚಿತ್ರಗಳು , ನಿಪಿ-8 ಚಾಸಾ-1 ರವರ ಹೇಳಿಕೆ ಹಾಗೂ ನಿಪಿ-9 ಭಾರತೀಯ ನಾಗರೀಕ ಸುರಕ್ಷ ಸಂಹಿತೆ ಕಲಂ 183 ರ ಅಡಿಯಲ್ಲಿ ಬಾದಿತರ ಹೇಳಿಕೆಯಾಗಿರುತ್ತದೆ.

11. ಮುಂದುವರೆದು, ಅಭಿಯೋಜನೆ ಪರ ವಿಚಾರಣೆಗೊಳಪಡಿಸಲಾದ ಪ್ರಾಸಾ-1 ಈ ಪ್ರಕರಣದ ಪಿರ್ಯಾದಿಯಾಗಿದ್ದು, ತಮ್ಮ ಸಾಕ್ಷ್ಯದಲ್ಲಿ ದೂರನ್ನು ನಿಪಿ-1 ಮತ್ತು ಪಂಚನಾಮೆಯನ್ನು ನಿಪಿ-2, 4 ಮತ್ತು 6 ಎಂದು ಗುರುತಿಸಿ, ಚಾಸಾ-2 ಮತ್ತು ತನ್ನ ನಡುವೆ ಮಾತಿನ ಚಕಮಕಿಯಾಗಿದ್ದಾಗ ಆಕೆ ಮನೆ ಬಿಟ್ಟು ಹೋಗಿದ್ದು, ಆಗ ತಾನು ಪೊಲೀಸ್ ಠಾಣೆಗೆ ಹೋಗಿ ವಿಚಾರವನ್ನು ತಿಳಿಸಿದಾಗ ಪೋಲೀಸರು ನಿಪಿ-1, 2, 4 ಮತ್ತು 6 ಕ್ಕೆ ತನ್ನ ಸಹಿಯನ್ನು ಪಡೆದಿರುತ್ತಾರೆ. ನಿಪಿ-1, 2, 4 ಮತ್ತು 6 ರಲ್ಲಿನ ವಿಚಾರ ಗೊತ್ತಿಲ್ಲ, ಆರೋಪಿ ತನ್ನ ಮಗಳನ್ನು ಅಪಹರಿಸಿರಲಿಲ್ಲ, ಈ ಸಂಬಂದ ಪೋಲೀಸರಿಗೆ ತಾನು ಯಾವುದೇ ಹೇಳಿಕೆ ನೀಡಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಸರ್ಕಾರಿ ಸಹಾಯಕ ಅಭಿಯೋಜಕರು ಪ್ರಾಸಾ-1 ರವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ನ್ಯಾಯಾಲಯದ ಅನುಮತಿ ಪಡೆದು ಸಾಕ್ಷಿಯನ್ನು ಪಾಟೀಸವಾಲಿಗೆ ಒಳಪಡಿಸಿ ನೀಡಿದಂತಹ ಎಲ್ಲ ಸಲಹೆಗಳನ್ನು ಸಾಕ್ಷಿ ನಿರಾಕರಿಸಿ ಅಲ್ಲಗಳೆದಿರುತ್ತಾರೆ ಮತ್ತು ರಾಜೀ ಆಗಿರುವುದಾಗಿ ನುಡಿದಿರುತ್ತಾರೆ.

12. ಮುಂದುವರೆದು, ಅಭಿಯೋಜನೆ ಪರ ವಿಚಾರಣೆಗೊಳಪಡಿಸಲಾದ ಪ್ರಾಸಾ-2 ಈ ಪ್ರಕರಣದ ನೊಂದ ಬಾಲಕಿಯಾಗಿದ್ದು, ಇವರು ತಮ್ಮ ಸಾಕ್ಷ್ಯದಲ್ಲಿ ತನ್ನ ಹಾಗೂ ಚಾಸಾ-1 ರವರ ನಡುವೆ ಮಾತಿನ ಚಕಮಕಿಯಾದಾಗ ತಾನು ಸಿಟ್ಟಾಗಿ ಮನೆ ಬಿಟ್ಟು ಹೋಗಿರುವುದಾಗಿ, ಆರೋಪಿ ತನ್ನನ್ನು ಅಪಹರಿಸಿರಲಿಲ್ಲ, ನಿಪಿ- 4, 6 ಮತ್ತು 9 ರಲ್ಲಿ ವಿಚಾರಗಳು ತನಗೆ ಗೊತ್ತಿಲ್ಲ ಎಂದು, ನಿಪಿ-9 ರಲ್ಲಿ ವಿಚಾರಳನ್ನು ತಾನು ಆ ಸಮಯದಲ್ಲಿ ಕೆಲವು ಒತ್ತಡಗಳಿಂದ ಕೊಟ್ಟಿರುವುದಾಗಿ ಹಾಗೂ ಪೋಲೀಸರಿಗೆ ತಾನು ಯಾವುದೇ ಹೇಳಿಕೆ ನೀಡಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಸರ್ಕಾರಿ ಸಹಾಯಕ ಅಭಿಯೋಜಕರು ಪ್ರಾಸಾ-2 ರವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ನ್ಯಾಯಾಲಯದ ಅನುಮತಿ ಪಡೆದು ಸಾಕ್ಷಿಯನ್ನು ಪಾಟೀಸವಾಲಿಗೆ ಒಳಪಡಿಸಿ ನೀಡಿದಂತಹ ಎಲ್ಲ ಸಲಹೆಗಳನ್ನು ಸಾಕ್ಷಿ ನಿರಾಕರಿಸಿ ಅಲ್ಲಗಳೆದಿರುತ್ತಾರೆ ಮತ್ತು ರಾಜೀ ಆಗಿರುವುದಾಗಿ ನುಡಿದಿರುತ್ತಾರೆ.

13. ಮುಂದುವರೆದು, ಈ ಪ್ರಕರಣವನ್ನು ಆರೋಪಿತನು ಭಾ.ನ್ಯಾ.ಸಂ. ಕಲಂಃ 137(2) ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆಂದು ದಾಖಲಿಸಿದ್ದು, ಅಭಿಯೋಜನೆಯು ಆರೋಪಿತನ

ವಿರುದ್ಧದ ಆರೋಪವನ್ನು ಸ್ಥಾಪಿಸಲು ಪ್ರಾಸಾ-1 ಮತ್ತು 2 ರವರನ್ನು ವಿಚಾರಣೆಗೆ ಒಳಪಡಿಸಿರುತ್ತದೆ. ಪ್ರಾ.ಸಾ-1 ರವರು ಈ ಪ್ರಕರಣದ ಪಿರ್ಯಾದಿಯಾಗಿದ್ದು, ಪ್ರಾಸಾ-2 ನೊಂದ ಬಾಲಕಿಯಾಗಿದ್ದು ತಮ್ಮ ಸಾಕ್ಷ್ಯದಲ್ಲಿ ಅಭಿಯೋಜನೆಗೆ ಪೂರಕವಾಗಿ ಸಾಕ್ಷ್ಯ ನುಡಿದಿರುವುದಿಲ್ಲ ಹಾಗೂ ನಿಪಿಃ1 ರಲ್ಲಿನ ಯಾವ ಅಂಶವನ್ನು ಪ್ರಾಸಾ-1 ರವರು ನುಡಿದಿರುವುದಿಲ್ಲ ಬದಲಿಗೆ ಪ್ರಾಸಾ-1 ತಮ್ಮ ಸಾಕ್ಷ್ಯದಲ್ಲಿ ಚಾಸಾ-2 ಮತ್ತು ತನ್ನ ನಡುವೆ ಮಾತಿನ ಚಕಮಕಿಯಾಗಿದ್ದಾಗ ಆಕೆ ಮನೆ ಬಿಟ್ಟು ಹೋಗಿದ್ದು, ಆಗ ತಾನು ಪೊಲೀಸ್ ಠಾಣೆಗೆ ಹೋಗಿ ವಿಚಾರವನ್ನು ತಿಳಿಸಿದಾಗ ಪೋಲೀಸರು ನಿಪಿ-1, 2, 4 ಮತ್ತು 6 ಕ್ಕೆ ತನ್ನ ಸಹಿಯನ್ನು ಪಡೆದಿರುತ್ತಾರೆ. ನಿಪಿ-1, 2, 4 ಮತ್ತು 6 ರಲ್ಲಿನ ವಿಚಾರ ಗೊತ್ತಿಲ್ಲ, ಆರೋಪಿ ತನ್ನ ಮಗಳನ್ನು ಅಪಹರಿಸಿರಲಿಲ್ಲ, ಈ ಸಂಬಂದ ಪೋಲೀಸರಿಗೆ ತಾನು ಯಾವುದೇ ಹೇಳಿಕೆ ನೀಡಿಲ್ಲ ಎಂದು ನುಡಿದಿರುತ್ತಾರೆ. ಅದೇ ರೀತಿ ಚಾಸಾ-2 ರವರು ಸಹ ತನ್ನ ಹಾಗೂ ಚಾಸಾ-1 ರವರ ನಡುವೆ ಮಾತಿನ ಚಕಮಕಿಯಾದಾಗ ತಾನು ಸಿಟ್ಟಾಗಿ ಮನೆ ಬಿಟ್ಟು ಹೋಗಿರುವುದಾಗಿ, ಆರೋಪಿ ತನ್ನನ್ನು ಅಪಹರಿಸಿರಲಿಲ್ಲ, ನಿಪಿ- 4, 6 ಮತ್ತು 9 ರಲ್ಲಿ ವಿಚಾರಗಳು ತನಗೆ ಗೊತ್ತಿಲ್ಲ ಎಂದು, ನಿಪಿ-9 ರಲ್ಲಿ ವಿಚಾರಗಳನ್ನು ತಾನು ಆ ಸಮಯದಲ್ಲಿ ಕೆಲವು ಒತ್ತಡಗಳಿಂದ ಕೊಟ್ಟಿರುವುದಾಗಿ ಹಾಗೂ ಪೋಲೀಸರಿಗೆ ತಾನು ಯಾವುದೇ ಹೇಳಿಕೆ ನೀಡಿಲ್ಲ ನುಡಿದಿರುತ್ತಾರೆ. ಈ ಪ್ರಕರಣದ ಪ್ರಮುಖ ಸಾಕ್ಷಿಗಳ ಪ್ರತಿಕೂಲತೆ ಅಭಿಯೋಜನೆಗೆ ಆರೋಪಿತನ ಮೇಲೆ ಮಾಡಲಾಗಿರುವ ಆರೋಪಗಳನ್ನು ರುಜುವಾತುಪಡಿಸಲು ಸಾಧ್ಯವಾಗಿರುವುದಿಲ್ಲ. ಆರೋಪಿತರ ವಿರುದ್ಧ ಆಪಾದಿಸಿರುವ ಆರೋಪಗಳನ್ನು ಸಾಬೀತು ಪಡಿಸಲು ಯಾವುದೇ ಬಲವಾದ ಸಾಕ್ಷ್ಯ ಈ ನ್ಯಾಯಾಲಯದ ಮುಂದೆ ಇರುವುದಿಲ್ಲ. **ಆದ್ದರಿಂದ ಅಂಶ-1 ನ್ನು ನಕಾರಾತ್ಮಕ ಎಂದು ಉತ್ತರಿಸಲಾಗಿದೆ.**

**14. ಅಂಶ-2:** ಮೇಲೆ ಚರ್ಚಿಸಿರುವ ಅಂಶಗಳಿಗಾಗಿ ಈ ಕೆಳಗಿನಂತೆ,

**ಆದೇಶ**

ಭಾ.ನಾ.ಸು.ಸಂ.ಕಲಂ 271(1) ರಡಿಯಲ್ಲಿ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಆರೋಪಿತನ ವಿರುದ್ಧ ಮಾಡಲಾದ ಭಾ.ನ್ಯಾ.ಸಂ.ಕಲಂ137(2) ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧಗಳಿಂದ ಆರೋಪಿತನನ್ನು ದೋಷಮುಕ್ತಗೊಳಿಸಿ ನಿರ್ದೋಶಿಗಳು ಎಂದು ಖುಲಾಸೆಗೊಳಿಸಲಾಗಿದೆ.

ಆರೋಪಿತನ ಹಾಗೂ ಆತನ ಜಾಮೀನುದಾರರು ಬರೆದುಕೊಟ್ಟ ಜಾಮೀನು ಮುಚ್ಚಳಿಕೆ ಪತ್ರಗಳನ್ನು ಅಪೀಲು ಅವಧಿಯ ನಂತರ ರದ್ದು ಪಡಿಸಲು ಆದೇಶಿಸಲಾಗಿದೆ.

(ಉಕ್ತಲೇಖನವನ್ನು ಗಣಕಯಂತ್ರದ ಮೂಲಕ ನೇರವಾಗಿ ಶೀಘ್ರಲಿಪಿಗಾರರಿಗೆ ನೀಡಿ, ಅವರು ಬೆರಳಚ್ಚು ಮಾಡಿದ ನಂತರ, ತಪ್ಪುಗಳನ್ನು ತಿದ್ದಿ, ಸರಿಪಡಿಸಿ ತೆರೆದ ನ್ಯಾಯಾಲಯದಲ್ಲಿ ತೀರ್ಪನ್ನು ದಿಃ 29 ನೇ ಏಪ್ರಿಲ್ 2026 ರಂದು ಘೋಷಿಸಲಾಗಿದೆ)

**(ಪ್ರೀತಿ.ಕೆ)**
ಅಪರ ಸಿವಿಲ್ ನ್ಯಾಯಾಧೀಶರು & ಜೆ.ಎಂ.ಎಫ್.ಸಿ.,
ದೊಡ್ಡಬಳ್ಳಾಪುರ

**:ಅನುಬಂಧ:**

**1. ಅಭಿಯೋಜನೆ ಪರ ಸಾಕ್ಷಿಗಳ ಪಟ್ಟಿಃ**

ಪ್ರಾಸಾ :1 : ರೂಪಾ. ಸಿ

ಪ್ರಾಸಾ ಃ2 : ಬಿಂದು

**2. ಅಭಿಯೋಜನೆ ಪರ ದಾಖಲೆಗಳ ಪಟ್ಟಿಃ**

ನಿಪಿ :1 :ದೂರು

ನಿಪಿ :2, 4 ಮತ್ತು 6 :ಸ್ಥಳ ಪಂಚನಾಮೆ

ನಿಪಿ-3, 5 ಮತ್ತು 7 :ಛಾಯಾಚಿತ್ರಗಳು

ನಿಪಿ-8 :ಚಾಸಾ-1 ರವರ ಹೇಳಿಕೆ

ನಿಪಿ-9 :ಭಾ. ನಾ.ಸು. ಸಂ. ಕಲಂ 183 ರ ಅಡಿಯಲ್ಲಿ ಚಾಸಾ-2 ರವರ ಹೇಳಿಕೆ

**2. ಅಭಿಯೋಜನೆ ಪರ ಮುದ್ದೆ ಮಾಲುಗಳ ಪಟ್ಟಿಃ**

ಇಲ್ಲ

**3. ಆರೋಪಿಗಳ ಪರ ಸಾಕ್ಷಿಗಳ ಪಟ್ಟಿಃ**

-ಇಲ್ಲಾ -

**4. ಆರೋಪಿಗಳ ಪರ ದಾಖಲೆಗಳ ಪಟ್ಟಿಃ**

-ಇಲ್ಲಾ -

**(ಪ್ರೀತಿ.ಕೆ)**
ಅಪರ ಸಿವಿಲ್ ನ್ಯಾಯಾಧೀಶರು & ಜೆ.ಎಂ.ಎಫ್.ಸಿ.,
ದೊಡ್ಡಬಳ್ಳಾಪುರ